**Office of the Deputy Commissioner Ballari District, Ballari- 583101**

**Telephone: 08392-277100.Fax: 08392-272538 Email: dcbellary@gmail.com**

SI/Rev/Land Reforms/36/2018-19 Dated 12.03.2020

NOTARY GOVT. OF KARNATAKA
Name: Krishen Kurubara
Area: Ballari Taluk Revenue
Regd: LAW 349 LCL 2014
Expiry Date: 10-12 2021

**-:PROCEEDINGS:-**

**Subject:** Permission Under Section 109 of Karnataka Land Reforms Act to M/s.Minera Steel Power Private Limited for purchasing land bearing Survey Number 68 extent 2.96 acres and other Survey Numbers total extent 41.62 acres of land in Yarabanahalli Village, Sandur Taluk, Ballari District for Industrial purpose.

Ref:

1. M/s Minera Steel Power Private Limited requisition letter dtd 30.09.2018
2. Tahasildar Sandur letter SI/Rev/Land Reforms/45/2018-19 dtd 05.10.2018
3. Commissioner, Commerce and Industries Department vide letter Karnataka Udyoga Mitra/SHLCC-SLSWCC/Approval/2018-19 dtd 31.08.2018
4. Commissioner, Vijayanagar Area Development Authority letter No/VADA/ Planning/Master Plan/Land Use Information/08/2018-19 dtd 21.01.2019

******

**PREAMBLE:**

With reference to the above subject reference-1 M/s.Minera Steel Power Private Limited had applied for 109 permission in Form No -15A for clearance to purchase land bearing Survey Number 68 extent 2.96 acres and other Survey Numbers total extent 41.62 acres of agriculture land in Yarabanahalli Village, Sandur Taluk, Ballari District to Industrial purpose U/s 109 Karnataka Land Reforms Act 1961.

In the letter of reference-2, the Tahasildar, Sandur has proposed to exempt the Karnataka Land Reforms Act 1961, for purchasing total land bearing Survey Number 68 extent 2.96 acres and other Survey measuring 54.48 acres for industrial purpose.

Translated from Kannada to English

TRUE COPY ATTESTED BY ME
14/11/20
Advocate & Notary BALLARI

The description of the proposed land is as follows.

| Survey Number | Extent As per RTC | Akarband as per extent | Land Owners Name As per RTC |
|---|---|---|---|
| 1 | 2 | 3 | 4 |
| 68 | 2.96 | 2.96 | H.Noor Ahammed S/o H.Hussain Peeran |
| 69 | 7.35 | 7.35 | H.Noor Ahammed S/o H.Hussain Peeran |
| 70 | 5.31 | 5.31 | H.Noor Ahammed S/o H.Hussain Peeran |
| 73/A1 | 4.72 | 4.72 | H.Noor Ahammed S/o H.Hussain Peeran |
| 73/A2(P) | 6.86 | 6.86 | H.Noor Ahammed S/o H.Hussain Peeran |
| 73/B | 2.51 | 2.51 | H.Noor Ahammed S/o H.Hussain Peeran |
| 78/a | 3.24 | 3.24 | H.Noor Ahammed S/o H.Hussain Peeran |
| 78/aa | 3.24 | 3.24 | H.Noor Ahammed S/o H.Hussain Peeran |
| 78/e | 3.23 | 3.23 | H.Noor Ahammed S/o H.Hussain Peeran |
| 79 | 4.83 | 4.83 | H.Noor Ahammed S/o H.Hussain Peeran |
| 79 | 4.83 | 4.83 | H.Noor Ahammed S/o H.Hussain Peeran |
| 105 | 1.91 | 1.91 | H.Noor Ahammed S/o H.Hussain Peeran |
| 73/A2(P) | 6.00 | 6.00 | H.Tanveer Ahammed S/o Noor Ahammed |
| | **56.99** | **56.99** | |

Verified that the above mentioned lands proposed are Patta lands and no applications are pending i.e. Form Number - 7, Not an Inam Land, no application are pending under PTCL Act, Tahasildar Sandur has reported that 'No Cases' have been registered under the Act and the land reforms Act is not violated.

Survey Number 73/A2 extent 12.86 acres and Survey Number 73/B extent 2.51 acres total extent 15.37 acres of land are originally 'Grant Lands'. Documents related to these Survey Numbers are not submitted, hence these referred lands are dropped from the said proposal.

NOTARY
Name: Kishan Kurubara
Area: Ballari Taluk Revenue
Regd: LAW 349 LCL 2014
Expiry Date: 19.12.2021
GOVT. OF KARNATAKA

TRUE COPY ATTESTED BY ME

In the reference-3, Commissioner, Commerce and Industries Department has permitted the company to purchase the lands for setting up Industry.

In the reference-4, Commissioner, Vijayanagara Area Development Authority indicated that Survey Number 68, 70, 78 are coming under Industrial Zone and Sy No 105 79, 69 lands reserved for Buffer and Industrial purpose.

Under Section 109 (1) of the Karnataka Land Reforms Act 1961, Deputy Commissioner is empowered to exempt 20 units ie 108 acres of land for industrial purpose. So based on the reports in reference to (1) to (4) M/s Minera Steel Power Private Limited under the Land Reforms Act 1961 section 109(1), land bearing Survey Number 38 extent 2.96 acres and other Survey Numbers total measuring 41.62 of acres of land in Yarabanahalli Village for purchase.

**ORDER**

Sl/Rev/Land Reforms/36/2018-19 Dated 12.03.2020

As per above mentioned reasons M/s Minera Steel Power Private Limited is given permission to purchase agriculture lands Sy No 68, 69, 70, 73, 78, 79, 105 total measuring 41.62 acres of Yarabanahalli Village Sandur Taluk for Industrial establishment U/s 109 (1) of Land Reforms Act 1961 section 34, 66, 79A, 79B and 80, with the following conditions

**CONDITIONS**

1. The applicants should be permitted to use in the purchased lands, if they own cart road, sidewalks, and connecting roads, ponds, and ditches for public use as per legal.
2. If any debts on the proposed lands, the responsibility of the Applicants should be settled the debts.
3. The applicant is directly responsible for any problems in the sale transactions process between land owner and applicant Company.
4. The lands must be utilized for the purpose for which permission in grant within two years as per conditions of purchasing the lands and same should be intimated to DC Bellary in writing.

NOTARY GOVT. OF KARNATAKA

TRUE COPY ATTESTED BY ME

5. Loan can be taken to construct the industrial establishment from Government or any scheduled bank or a Co-operative agriculture and Rural Development Bank or to a person who is entitled to shareholding as provided in section 3 of the Companies Act 1956 or any 55% holding shares by State or Central Government undertaking organizations as per the column 3 of Companies Act 1956. Land should not be used for any other purpose.
6. Within two years order for Non Agriculture should be obtained from the Deputy Commissioner as per Section 95 of Karnataka Land Revenue Act 1964.
7. If lands come under purview of Urban Development Board /CDP/ODP, permission should be taken from respective Dept.
8. This permission is only as per Karnataka Land Reforms Act 1961 Section 109 and for action if violate other Acts.
9. Company should abide local laws and Central laws.
10. Permission will be cancelled and land will be forfeited to Govt, if any violations in above said conditions is noticed.
11. If any documents submitted for exemption of purchasing agriculture land under 109 of Karnataka Land Reforms Act are found fake and concocted documents, permission order would be cancelled automatically, under section 109 of Land Reforms Act 1961.

**-Sd-**
Deputy Commissioner
Ballari

**To:**
M/s Minera Steel Power Private Limited.
Copy to:

1. Assistant Commissioner, Ballari for information
2. Tahasildar Sandur for information.
3. District Registrar, Ballari for information
4. Sub-Registrar, Sandur for information.

NOTARY
Name: Krishan Kuruba
Area: Ballari Taluk Revenue
Regd: LAW 349 LCL 2014
Expiry Date: 10-12 2021
GOVT. OF KARNATAKA

"TRUE COPY"
ATTESTED BY ME

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಜಿಲ್ಲೆ, ಬಳ್ಳಾರಿ-583101
OFFICE OF THE DEPUTY COMMISSIONER, BALLARI DISTRICT, BALLARI-583101
Telephone: 08392-277100. Fax: 08392-272538 Email: dcbellary@gmail.com

ಸಂ/ಕಂ/ಭೂಸು/36/2018-19 ದಿನಾಂಕ: 12-03-2020

# -: ನಡವಳಿಗಳು :-

ವಿಷಯ:- ಸಂಡೂರು ತಾಲ್ಲೂಕು ಯರೋಬನಹಳ್ಳಿ ಗ್ರಾಮದ ಸ.ನಂ 68 ವಿ.2.96 ಮತ್ತು ಇತರೆ ಸರ್ವೇ ಸಂಖ್ಯೆಗಳ ಒಟ್ಟು ವಿಸ್ತೀರ್ಣ ಕ್ರಮವಾಗಿ 41.62 ಎಕರೆ ಜಮೀನನ್ನು ಮೆ॥ಮಿನೇರಾ ಸ್ಟೀಲ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಕೈಗಾರಿಕಾ ಉದ್ದೇಶಕ್ಕಾಗಿ ಖರೀದಿಸಲು ಕರ್ನಾಟಕ ಭೂಸುಧಾರಣೆ ಕಾಯ್ದೆ ಕಲಂ 109ರ ಅಡಿಯಲ್ಲಿ ಪರವಾನಿಗೆ ನೀಡುವ ಬಗ್ಗೆ.

ಉಲ್ಲೇಖ:- 1)ಮೆ॥ಮಿನೇರಾ ಸ್ಟೀಲ್ ಪವರ್ ಪ್ರೈವೇಟ್ ಲಿಮಿಟೆಡ್ ಇವರ ಮನವಿ ದಿನಾಂಕ: 30.09.2018.
2)ತಹಶಿಲ್ದಾರರು, ಸಂಡೂರು ಇವರ ಪತ್ರ ಸಂಖ್ಯೆ/ಕಂ/ಭೂಸು/45/2018-19 ದಿನಾಂಕ:05.10.2018
3)ಆಯುಕ್ತರು,ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಪತ್ರ ಸಂಖ್ಯೆ/ಕಉಮಿ/SHLCC-SLSWCC/ಅನುಸರಣೆ/2018-19 ದಿನಾಂಕ:31.08.2018.
4)ಆಯುಕ್ತರು, ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ/ವಾಡಾ/ಯೋಜನೆ/ಮಾಸ್ಟರ್‌ಪ್ಲಾನ್‌ಭೂ.ಉ.ಮಾ/08/2018-19 ದಿನಾಂಕ:21.01.2019.

******

ಉಲ್ಲೇಖಿತ (1)ರ ಪತ್ರದನ್ವಯ ಮೆ॥ಮಿನೇರಾ ಸ್ಟೀಲ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಸಂಡೂರು ತಾಲ್ಲೂಕು ಯರೋಬನಹಳ್ಳಿ ಗ್ರಾಮದ ಸ.ನಂ 68 ವಿ.2.96 ಮತ್ತು ಇತರೆ ಸರ್ವೇ ಸಂಖ್ಯೆಗಳ ಒಟ್ಟು ವಿಸ್ತೀರ್ಣ ಕ್ರಮವಾಗಿ 56.99 ಎಕರೆ ಜಮೀನನ್ನು ಕೈಗಾರಿಕೆ ಉದ್ದೇಶಕ್ಕಾಗಿ ಖರೀದಿಸಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ಕಲಂ 109 ರಡಿ ವಿನಾಯಿತಿ ನೀಡಲು ನಿಗದಿತ ನಮೂನೆ 15ಎ ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

ಉಲ್ಲೇಖಿತ (2)ರ ಪತ್ರದಲ್ಲಿ ತಹಶೀಲ್ದಾರರು, ಸಂಡೂರು ಇವರು ಸಂಡೂರು ತಾಲ್ಲೂಕು ಯರೋಬನಹಳ್ಳಿ ಗ್ರಾಮದ ಸ.ನಂ 68 ವಿ.2.96 ಮತ್ತು ಇತರೆ ಸರ್ವೇ ಸಂಖ್ಯೆಗಳ ಒಟ್ಟು ವಿಸ್ತೀರ್ಣ ಕ್ರಮವಾಗಿ 54.48 ಎಕರೆ ಜಮೀನನ್ನು ಕೈಗಾರಿಕೆ ಉದ್ದೇಶಕ್ಕಾಗಿ ಖರೀದಿಸಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ಕಲಂ 109 ರಡಿ ವಿನಾಯಿತಿ ನೀಡಲು ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಸ್ತಾಪಿತ ಜಮೀನುಗಳ ವಿವರ ಈ ಕೆಳಗಿನಂತೆ ಇರುತ್ತದೆ.

Deputy Commissioner Office, BALLARI

ಮುಂದುವರೆದಿದೆ ಪುಟ(2)ಕ್ಕೆ

| ಸರ್ವೇ ಸಂಖ್ಯೆ | ಪಹಣಿ ಪ್ರಕಾರ ವಿಸ್ತೀರ್ಣ | ಆಕಾರ್ ಬಂದ್ ಪ್ರಕಾರ ವಿಸ್ತೀರ್ಣ | ಪಹಣಿ ಪ್ರಕಾರ ಪಟ್ಟಾದಾರರ ಹೆಸರು |
|---|---|---|---|
| 1 | 2 | 4 | 5 |
| 68 | 2.96 | 2.96 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 69 | 7.35 | 7.35 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 70 | 5.31 | 5.31 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 73/ಎ1 | 4.72 | 4.72 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 73/ಎ2(ಪೈ) | 6.86 | 6.86 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 73/ಬಿ | 2.51 | 2.51 | ಎಚ್.ನೂರ ಅಹಮದ್ ತಂದೆ **ಎಚ್.ಹುಸೇನ್ ಪೀರನ್** |
| 78/ಅ | 3.24 | 3.24 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 78/ಆ | 3.24 | 3.24 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 78/ಇ | 3.23 | 3.23 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 79 | 4.83 | 4.83 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 79 | 4.83 | 4.83 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 105 | 1.91 | 1.91 | ಎಚ್.ನೂರ ಅಹಮದ್ ತಂದೆ ಎಚ್.ಹುಸೇನ್ ಪೀರನ್ |
| 73/ಎ2(ಪೈ) | 6.00 | 6.00 | ಎಚ್.ತನವೀರವ ಅಹಮ್ಮದ್ ತಂದೆ ನೂರು ಅಹಮ್ಮದ್ |
| | 56.99 | 56.99 | |

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಮೇಲ್ಕಂಡ ಜಮೀನುಗಳು ಪಟ್ಟಾ ಜಮೀನುಗಳಾಗಿರುತ್ತವೆ. ಇನಾಂ ಜಮೀನುಗಳಾಗಿರುವುದಿಲ್ಲ. ಸದರಿ ಜಮೀನುಗಳ ಮೇಲೆ ಗೇಣಿ, ನಮೂನೆ-7 ಅರ್ಜಿ, ಇನಾಂ ಕಾಯ್ದೆ, ಪಿ.ಟಿ.ಸಿ.ಎಲ್. ಕಾಯ್ದೆಯಡಿ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ ಹಾಗೂ ಭೂ ಸುಧಾರಣೆ ಕಾಯ್ದೆ ಉಲ್ಲಂಘನೆಯಾಗಿರುವುದಿಲ್ಲವೆಂದು ತಹಶೀಲ್ದಾರರು, ಸಂಡೂರು ಇವರು ವರದಿ ಮಾಡಿರುತ್ತಾರೆ.

ಸ.ಸಂ73/ಎ2 ವಿಸ್ತೀರ್ಣ 12.86 ಎಕರೆ ಮತ್ತು ಸ.ಸಂ.73/ಬಿ ವಿಸ್ತೀರ್ಣ: 2.51 ಎಕರೆ ಜಮೀನುಗಳ ಒಟ್ಟು ವಿಸ್ತೀರ್ಣ 15.37ಎಕರೆ ಜಮೀನುಗಳು ಮೂಲತಃ ಮಂಜೂರಾತಿ ಜಮೀನಾಗಿರುವುದರಿಂದ ಮತ್ತು ಸೂಕ್ತ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಸದರಿ ವಿಸ್ತೀರ್ಣವನ್ನು ಪ್ರಸ್ತಾವನೆಯಿಂದ ಕೈಬಿಡಲಾಗಿರುತ್ತದೆ.

Deputy Commissioner Office, B...

ಉಲ್ಲೇಖ (3) ರಲ್ಲಿ ಆಯುಕ್ತರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ಸದರಿ ಸಂಸ್ಥೆಯವರಿಗೆ ಕೈಗಾರಿಕೆ ಸ್ಥಾಪನೆಗೆ ಜಮೀನು ಖರೀದಿಸಲು ಅನುಮತಿ ನೀಡಿರುತ್ತಾರೆ.

ಉಲ್ಲೇಖ (4) ರಲ್ಲಿ ಆಯುಕ್ತರು, ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರು ಪ್ರಸ್ತಾಪಿತ ಜಮೀನುಗಳ ಪೈಕಿ ಸ.ಸಂ.68, 70, 78 ಜಮೀನುಗಳು ಕೈಗಾರಿಕೆ ವಲಯದಲ್ಲಿ ಬರುತ್ತವೆ ಮತ್ತು ಸ.ಸಂ.105, 79, 69 ಬಫರ್ ಮತ್ತು ಕೈಗಾರಿಕಾ ಉದ್ದೇಶಕ್ಕೆ ಮಹಾ ಯೊಜನೆಯಲ್ಲಿ ಕಾಯ್ದಿರಿಸಲಾಗಿದೆ.

ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ ಕಲಂ 109(1)(i) ರ ಅಡಿ ಜಿಲ್ಲಾಧಿಕಾರಿಗಳು 20 ಘಟಕಗಳಿಗೆ ಅಂದರೆ 108.00 ಎಕರೆ ಜಮೀನನ್ನು ಕೈಗಾರಿಕೆಉದ್ದೇಶಕ್ಕಾಗಿ ಖರೀದಿಸಲು ವಿನಾಯಿತಿ ನೀಡಲು ಅಧಿಕಾರದತ್ತರಾಗಿರುತ್ತಾರೆ. ಆದ್ದರಿಂದ ಉಲ್ಲೇಖ (1) ರಿಂದ (4)ರ ವರದಿಗಳನ್ನು ಆಧರಿಸಿ ಮೆ॥ಮಿನೇರಾ ಸ್ಟೀಲ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ಕಲಂ 109(1)(i)ರಡಿ ಸಂಡೂರು ತಾಲ್ಲೂಕು ಯರೋಬನಹಳ್ಳಿ-ಗ್ರಾಮದ ಸ.ನಂ 68 ವಿ.2.96 ಮತ್ತು ಇತರೆ ಸರ್ವೇ ಸಂಖ್ಯೆಗಳ ಒಟ್ಟು ವಿಸ್ತೀರ್ಣ **41.62 ಎಕರೆ** ಜಮೀನನ್ನು ಕೈಗಾರಿಕೆ ಉದ್ದೇಶಕ್ಕಾಗಿ ಖರೀದಿಸಲು ಈ ಕೆಳಕಂಡ.

## -: ಆದೇಶ :-

**ಸಂ/ಕಂ/ಭೂಸು/36/2018-19** **ದಿನಾಂಕ: [illegible].03.2020**

ಪೀಠಿಕೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ಮೆ॥ಮಿನೇರಾ ಸ್ಟೀಲ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಸಂಡೂರು ತಾಲ್ಲೂಕು ಯರೋಬನಹಳ್ಳಿ ಗ್ರಾಮದ **68, 69, 70, 73, 78, 79, 105, ಸರ್ವೇ ಸಂಖ್ಯೆಗಳ** ಒಟ್ಟು ವಿಸ್ತೀರ್ಣ **41.62 ಎಕರೆ** ಜಮೀನನ್ನು ಕೈಗಾರಿಕೆ ಉದ್ದೇಶಕ್ಕಾಗಿ ಖರೀದಿಸಲು ಭೂ ಸುಧಾರಣೆ ಕಾಯ್ದೆ 1961 ಕಲಂ 109(1)(i) ರಂತೆ ಸದರಿ ಕಾಯ್ದೆಯ ಕಲಂ 34, 66, 79ಎ, 79ಬಿಹಾಗೂ 80 ಗಳಿಗೆ ವಿನಾಯಿತಿ ನೀಡಿ ಈ ಕೆಳಕಾಣಿಸಿದ ಷರತ್ತುಗಳಿಗೆ ಒಳಪಟ್ಟು ಆದೇಶಿಸಲಾಗಿದೆ.

**ಷರತ್ತುಗಳು:-**

1) ಅರ್ಜಿದಾರ ಸಂಸ್ಥೆಯು ಕ್ರಯಕ್ಕೆ ಪಡೆಯುವ ಜಮೀನುಗಳಲ್ಲಿ ಬಂಡಿದಾರಿ, ಕಾಲುದಾರಿ ಮತ್ತು ಸಂಪರ್ಕ ರಸ್ತೆ, ಕೆರೆ-ಕಟ್ಟೆ, ಹಳ್ಳಗಳಿದ್ದರೆ ಅವುಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ಕಾನೂನು ರೀತ್ಯ ಅವಕಾಶ ಮಾಡಿಕೊಡತಕ್ಕದ್ದು.
2) ಪ್ರಸ್ತಾಪಿತ ಜಮೀನುಗಳ ಮೇಲೆ ಯಾವುದೇ ಋಣಭಾರಗಳಿದ್ದಲ್ಲಿ ಅವುಗಳನ್ನು ಇತ್ಯರ್ಥಪಡಿಸಿಕೊಳ್ಳುವುದು ಅರ್ಜಿದಾರ ಸಂಸ್ಥೆಯ ಜವಾಬ್ದಾರಿಯಾಗಿರುತ್ತದೆ.
3) ಪಟ್ಟಾದಾರರು ಹಾಗೂ ಅರ್ಜಿದಾರ ಸಂಸ್ಥೆಯ ನಡುವೆ ಮಾರಾಟ ಪ್ರಕ್ರಿಯೆಯಲ್ಲಿ ಯಾವುದಾದರೂ ತೊಂದರೆಗಳಾದಲ್ಲಿ ಅದಕ್ಕೆ ಅರ್ಜಿದಾರ ಸಂಸ್ಥೆಯೇ ನೇರ ಹೊಣೆಗಾರರಾಗಿರುತ್ತಾರೆ.
4) ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿ ಮಾಡಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು 2 ವರ್ಷದೊಳಗಾಗಿ ಉಪಯೋಗಿಸತಕ್ಕದ್ದು, ಮತ್ತು ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಲಿಖಿತವಾಗಿ ಮಾಹಿತಿ ಸಲ್ಲಿಸತಕ್ಕದ್ದು.

Deputy Commissioner Office, BALLARI
ಜಿಲ್ಲಾಧಿಕಾರಿಗಳ ಕಛೇರಿ, ಬಳ್ಳಾರಿ

ಮುಂದುವರೆದಿದೆ ಪುಟ (4)ಕ್ಕೆ

5) ವಿನಾಯಿತಿ ಪಡೆದವವರು ಸರ್ಕಾರಿ ಅಥವಾ ಯಾವುದೇ ಷಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ 1956 ರ ಕಲಂ 3 ರಲ್ಲಿ ಹೇಳಿರುವಂತೆ ಶೇ. 55 ಪೇಯಿಡ್ ಆಫ್ ಶೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ, ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

6) ಈ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 95 ರಂತೆ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆ ಆದೇಶ ಪಡೆಯಬೇಕು.

7) ಈ ಜಮೀನು ನಗರಾಭಿವೃದ್ಧಿ ಪ್ರಾಧಿಕಾರ/ಸಿ.ಡಿ.ಪಿ./ಒ.ಡಿ.ಪಿ/ ವ್ಯಾಪ್ತಿಯಲ್ಲಿ ಬಂದರೆ ಅದರಂತೆ ಅನುಮತಿ ಪಡೆದು ಉಪಯೋಗಿಸಿಕೊಳ್ಳತಕ್ಕದ್ದು.

8) ಈ ಅನುಮತಿಯು ಕರ್ನಾಟಕ ಭೂ ಸುಧಾರಣೆ ಅಧಿನಿಯಮ ಕಾಯ್ದೆ 1961 ರ ಕಲಂ 109 ರ ಅನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆ ಅಡಿಯಲ್ಲಿ ಅಗತ್ಯ ಕ್ರಮ ಜರುಗಿಸಲು ಅವಕಾಶ ಇರುತ್ತದೆ.

9) ಸಂಸ್ಥೆ ನಡೆಸುವ ಚಟುವಟಿಕೆಗಳಲ್ಲಿ ಸ್ಥಳೀಯ ಕಾನೂನು ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.

10) ಮೇಲಿನ ಷರತ್ತುಗಳ ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತಗೊಳಿಸಲಾಗುವುದು.

11) ಅರ್ಜಿದಾರರು ಭೂ ಸುಧಾರಣೆ ಕಾಯ್ದೆ 1961 ರ ಕಲಂ 109 ರ ಅಡಿ ಕೃಷಿ ಜಮೀನು ಖರೀದಿಗೆ ಸಲ್ಲಿಸಿದ ದಾಖಲೆಗಳು ಸುಳ್ಳು ದಾಖಲೆಗಳಾಗಿದ್ದಲ್ಲಿ ಹಾಗೂ ಸೃಷ್ಟಿಸಿ ನೀಡಿದ ದಾಖಲೆಗಳು ಎಂದು ಕಂಡುಬಂದಲ್ಲಿ ಭೂ ಸುಧಾರಣೆ ಕಾಯ್ದೆ 1961 ರ ಕಲಂ 109 ರ ಅಡಿ ನೀಡುವ ಅನುಮತಿ ಆದೇಶ ತನ್ನಿಂತಾನೆಯೇ ರದ್ದಾಗುತ್ತದೆ.

Deputy Commissioner Office, BALLARI

ಜಿಲ್ಲಾಧಿಕಾರಿಗಳು,
ಬಳ್ಳಾರಿ.

ಇವರಿಗೆ,
ಮೆ॥ಮಿನೇರಾ ಸ್ಟೀಲ್ ಪವರ್ ಪ್ರೈವೇಟ್ ಲಿಮಿಟೆಡ್
ಪ್ರತಿಯನ್ನು :-
1) ಸಹಾಯಕ ಆಯುಕ್ತರು, ಬಳ್ಳಾರಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2) ತಹಶೀಲ್ದಾರರು, ಸಂಡೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3) ಜಿಲ್ಲಾ ನೋಂದಣಾಧಿಕಾರಿಗಳು, ಬಳ್ಳಾರಿ ಇವರಿಗೆ ಮಾಹಿತಿಗಾಗಿ.
4) ಉಪ ನೋಂದಣಾಧಿಕಾರಿಗಳು, ಸಂಡೂರು ಇವರಿಗೆ ಮಾಹಿತಿಗಾಗಿ.